ಅಧ್ಯಕ್ಷರೇ, ನಮ್ಮ ಸರ್ಕಾರವಾಗಲೀ, ಆಡಳಿತ ಪಕ್ಷವಾಗಲಿ, ವಿರೋಧ ಪಕ್ಷದ ನಾಯಕರನ್ನು ಹೊರಗೆ ಹಾಕಬೇಕು ಅವರ ಸದಸ್ಯರನ್ನು ಸಹ ಹೊರ ಹಾಕಬೇಕು ಎನ್ನುವ ಭಾವನೆ ಸರ್ವಥಾ ನಮಗೆ ಇರಲಿಲ್ಲ, ಈಗಲೂ ಇಲ್ಲ. ಈಗಾಗಲೇ ನಮ್ಮ ಉಪ ಮುಖ್ಯ ಮಂತ್ರಿಗಳು ತಾವೆಲ್ಲಾ ವಾಪಸ್ಸು ಬರಬೇಕೆಂದು ಕೇಳಿಕೊಂಡಿದ್ದಾರೆ. ಆದರೆ ನಾವು ಹೇಳಿದ ಹಾಗೆ ಆಗಬೇಕು ಎಂದು ಅವರು ಹೇಳುವುದು ಸರಿಯಲ್ಲ. ಇದರ ಉದ್ದೇಶ ಏನೆಂದರೆ ಅವರಿಗೆ ಈ ಸಭೆಯಲ್ಲಿ ಭಾಗವಹಿಸಲು ಇಷ್ಟವಿಲ್ಲ, ಈ ಸಭೆಯಲ್ಲಿ ಮುಂಗಡಪತ್ರದ ಮೇಲೆ ಮಾತನಾಡಲು ಅವರಿಗೆ ಇಷ್ಟವಿಲ್ಲ, ಸರ್ಕಾರದ ತಪ್ಪು ಒಪ್ಪುಗಳನ್ನು ಎತ್ತಿ ತೋರಿಸಲು ಅವರಿಗೆ ಇಷ್ಟವಿಲ್ಲ, ಆ ಕಾರಣದಿಂದ ಅವರು ಒಂದು ನೆಪ ಮಾಡಿಕೊಂಡು ಈ ರೀತಿ ಮಾಡುತ್ತಿದ್ದಾರೆ ಎಂದು ನಾವು ಭಾವಿಸಬೇಕಾಗಿದೆ. ಅವರೆಲ್ಲರೂ ಬಹಳ ಹಿರಿಯರು; ಬಹಳ ಅನುಭವಿಕರಾಗಿದ್ದಾರೆ. ಈ ದೇಶದಲ್ಲಿ ಒಳ್ಳೆಯ ಹೆಸರನ್ನು ತೆಗೆದುಕೊಂಡಿದ್ದಾರೆ. ಆದರೆ ನಿಯಮಗಳನ್ನು ಗಾಳಿಗೆ ತೂರಿ ಕೆಲಸ ಮಾಡುವುದು ಬೇಡ. ಸರ್ಕಾರದ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. ಈ ಒಂದು ಮೂಲಭೂತ ಅಂಶಗಳನ್ನು ತಿಳಿದುಕೊಂಡು ಈಗಲೂ ಸಹ ತಾವು ಒಪ್ಪಿದರೆ ನಾವು ನಿರ್ಣಯ ವಾಪಸ್ಸು ತೆಗೆದುಕೊಳ್ಳಲು ನಮ್ಮ ಉಪಮುಖ್ಯಮಂತ್ರಿಯವರು ಹೇಳಿದ ಹಾಗೆ ನಾವು ಸಿದ್ಧರಿದ್ದೇವೆ. ಅವರು ಈ ಸಭೆಯ ಕಾರ್ಯಕಲಾಪಗಳಲ್ಲಿ ಬಂದು ಭಾಗವಹಿಸಲಿ. ಏನಾದರೂ ಮಾತನಾಡುವುದು ಇದ್ದರೆ ಪ್ರಶ್ನೋತ್ತರ ಆದಮೇಲೆ ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್ : ಪ್ರಶ್ನೋತ್ತರ ಆದಮೇಲೆ ಕರೆಸುವುದು, ಮಾತನಾಡುವುದು ಎಂದು ಹೇಳುವುದು ಸರಿಯೇ?

ಅಧ್ಯಕ್ಷರು : ಶ್ರೀಮತಿ ಮೋಟಮ್ಮನವರೇ, ತಮ್ಮ ಪ್ರಶ್ನೆಗೆ ಉಪ ಪ್ರಶ್ನೆಯನ್ನು ತಾವು ಕೇಳಬಹುದು....

ಶ್ರೀಮತಿ ಮೋಟಮ್ಮ: ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇದರಲ್ಲಿ...

(ಗೊಂದಲ)

ಶ್ರೀ ಹಾರನಹಳ್ಳಿ ರಾಮಸ್ವಾಮಿ: ಈ ಕಡೆ ಇರುವ ಆಡಳಿತಪಕ್ಷದ ಸದಸ್ಯರುಗಳಿಗೆ ಆತ್ಮಗೌರವ ಇದೆ, ಸರ್ಕಾರಕ್ಕೆ ಆತ್ಮಗೌರವ ಇದೆ. ಬಗ್ಗುವುದಕ್ಕೆ ಭೂಮಿಯ ಮಟ್ಟದವರೆಗೆ ಬಗ್ಗಬಹುದು. ಆದರೆ ತಲೆಯನ್ನು ಭೂಮಿಯಿಂದ ಕೆಳಗಡೆ ಇಟ್ಟುಕೊಳ್ಳಲು ಸಾಧ್ಯವಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ಹೊರಗಡೆ ಹೋಗುತ್ತಿದ್ದೇನೆ. ಈ ವಾತಾವರಣದಿಂದ ನನಗೆ ಬಹಳ ನೋವಾಗಿದೆ. ನೀವು ಇದನ್ನು ಸರಿಪಡಿಸತಕ್ಕದ್ದು, ಹಾಗೂ ಒಂದು ತಿಳಿ ವಾತಾವರಣವನ್ನು ನಿರ್ಮಾಣ ಮಾಡುವುದರಲ್ಲಿ ನಿಮಗೆ ಇಚ್ಛೆಯಿಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ನಾವು ಸಿದ್ಧರಾಗಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಇದರಿಂದ ನನ್ನ ಮನಸ್ಸಿಗೆ ನೋವಾಗಿದೆ. ಪ್ರಶ್ನೋತ್ತರ ಮುಗಿದಮೇಲೆ ಇದರ ಬಗ್ಗೆ ಮಾತನಾಡೋಣ ಎಂದು ಹೇಳಿದರೆ ಹೇಗೆ? ಅದು ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಸರಿಯಾದ ಮಾರ್ಗವಲ್ಲ. ತಾವು ಸಂಖ್ಯಾ ಬಲವಿದೆ ಎಂದು ಏನು ಬೇಕಾದರೂ ಮಾಡಬಹುದು ಎಂದು ತಿಳಿದುಕೊಂಡಿದ್ದೀರಿ.

(ವಾಟಾಳ್ ನಾಗರಾಜ್ ಅವರು ಈ ಹಂತದಲ್ಲಿ ಸಭಾತ್ಯಾಗ ಮಾಡಿದರು)